ಶ್ರೀ ಸುಬೋದ್ ಯಾಧವ್ ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,
ಬೆಂಗಳೂರು.

******************************************************************************************

ಅ.ಸ.ಪತ್ರ ಕೆ.ಪಿ.ಎಲ್.ಸಿ./ಸಿಬ್ಬಂದಿ/ವಹಿ/03/2013-14 ದಿನಾಂಕ:27-05-2015

ಮಾನ್ಯರೆ,

**ವಿಷಯ :** ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಸಬಲಗೊಳಿಸುವುದು ಹಾಗೂ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ಎಂದು ಪುನರ್ ಪದನಾಮೀಕರಣ ಮಾಡುವ ಬಗ್ಗೆ,

**ಉಲ್ಲೇಖ**
1. ಸರ್ಕಾರದ ಆದೇಶ ಕ್ರ. ಡಿ.ಪಿ.ಎ.ಆರ್.350.ಎಸ್.ಎ.ಎಸ್.2009 ದಿನಾಂಕ:11-9-2009.
2. ನಿಗಮದ ಪ್ರಸ್ತಾವನೆ ಕ್ರ. ಸಮಸಂಖ್ಯೆ ದಿನಾಂಕ:25-5-2013
3. ನಿಗಮದ ಪ್ರಸ್ತಾವನೆ ಕ್ರ. ಸಮಸಂಖ್ಯೆ ದಿನಾಂಕ:23.6.2014.

*********

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವು ಸರ್ಕಾರಿ ಸ್ವಾಮ್ಯದ ನಿಗಮವಾಗಿದ್ದು, ಕಂಪನಿಗಳ ಆದಿನಿಯಮ, 1956ರ ಅನ್ವಯ ನೊಂದಾಯಿತವಾಗಿದೆ. ಈ ನಿಗಮಕ್ಕೆ ಸರ್ಕಾರದ ಕಾರ್ಯದರ್ಶಿ ಶ್ರೇಣಿಯ ಐ.ಎ.ಎಸ್ ವೃಂದದ ಹುದ್ದೆ ಮಂಜೂರಾಗಿದ್ದು, ಉಲ್ಲೇಖ 1 ಸರ್ಕಾರದ ಆದೇಶದಲ್ಲಿ ಸದರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ದಿನಾಂಕ 11.09.2009 ರಿಂದ ಮುಂದಿನ ಎರಡು ವರ್ಷಗಳ ಅವಧಿಗೆ **"ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ** ಎಂದು ಪದನಾಮೀಕರಿಸಲಾಗಿತ್ತು. ತದನಂತರ ಮುಂದುವರೆಸಿರುವುದಿಲ್ಲ.

ಸರ್ಕಾರಿ ಜಮೀನು ಒತ್ತುವರಿ ಗುರುತಿಸುವಿಕೆ, ತೆರವುಗೊಳಿಸುವಿಕೆ ಹಾಗೂ ಸಂರಕ್ಷಣೆಯ ಕಾರ್ಯವನ್ನು ಜಿಲ್ಲಾಧಿಕಾರಿಗಳೊಂದಿಗೆ ಸಮರ್ಪಕವಾಗಿ ಸಮನ್ವಯವನ್ನು ಸಮನ್ವಯಗೊಳಿಸಲು ಈ ಹಿಂದೆ ಇದ್ದಂತೆ ವ್ಯವಸ್ಥಾಪಕ ನಿದೇಶಕರ ಹುದ್ದೆಯನ್ನು **"ಸರ್ಕಾರದ ಕಾರ್ಯದರ್ಶಿ, ಕಂದಾಯ** ಇಲಾಖೆ ಹಾಗೂ ಪದನಿಮಿತ್ತ ವ್ಯವಸ್ಥಾಪಕ **ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ** ಪದನಾಮೀಕರಿಸುವ ಅಗತ್ಯ ಇದೆ.

ತವಾನಿಸಿದೆ
29/5/15

ಇತ್ತೀಚೆಗೆ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವನ್ನು ಬಲಿಷ್ಠಗೊಳಿಸುವ ಬಗ್ಗೆ ಸಾರ್ವಜನಿಕರಿಂದ ಅಹವಾಲುಗಳು ಕೇಳಿ ಬರುತ್ತಿವೆ. ನಿಗಮವು ತನ್ನ ಧ್ಯೇಯೋದ್ದೇಶಗಳ ಅನ್ವಯ ಕಾರ್ಯ ನಿರ್ವಹಿಸಲು ಹಾಗು ಇತ್ತೀಚೆಗೆ ವ್ಯಾಪಕವಾಗಿ ಕಂಡುಬರುತ್ತಿವ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ನಿಯಂತ್ರಿಸಲು ಸಮರ್ಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಈ ನಿಗಮವು ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ:

1. ಸರ್ಕಾರಿ ಜಮೀನುಗಳ ಒತ್ತುವರಿಯ ಮಾಹಿತಿ ಹಾಗೂ ಒತ್ತುವರಿಯಿಂದ ತೆರವುಗೊಳಿಸಿದ ಸರ್ಕಾರಿ ಜಮೀನುಗಳ ಮಾಹಿತಿಗಳನ್ನು ಕ್ರೋಢೀಕರಿಸಿ ಸರ್ಕಾರ ಹಾಗೂ ನ್ಯಾಯಾಲಯಕ್ಕೆ ಒದಗಿಸುತ್ತಿದೆ.
2. ಎಲ್ಲಾ ಜಿಲ್ಲಾಧಿಕಾರಿಗಳಿಂದ ಸರ್ಕಾರಿ ಜಮೀನು ಒತ್ತುವರಿ ತೆರವು ಬಗ್ಗೆ ಕ್ರಿಯಾ ಯೋಜನೆ ತಯಾರು ಮಾಡಿಸಿ ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಸದರಿ ಕ್ರಿಯಾ ಯೋಜನೆಯನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸಬೇಕಿದೆ.
3. ರಾಜ್ಯದ ಕೆರೆ ಜಮೀನುಗಳ ಸಂಪೂರ್ಣ ಮಾಹಿತಿಗಳನ್ನು ಸಂಗ್ರಹಿಸಿ ಸದರಿ ಮಾಹಿತಿಯನ್ನು ಸಾರ್ವಜನಿಕರಿಗೆ ಲಭ್ಯ ಮಾಡಿಕೊಡಲು ವೆಬ್ ಸೈಟ್ ನಿರ್ಮಾಣ ಮಾಡಿ ನಿರ್ವಹಿಸಲಾಗುತ್ತಿದೆ.
4. ಇದೇ ರೀತಿ ಸರ್ಕಾರಿ ಜಮೀನುಗಳು, ಮುಜರಾಯಿ ಇಲಾಖೆಗೆ ಸೇರಿದ ಸ್ವತ್ತಿಗಳು, ವಕ್ಫ್ ಸ್ವತ್ತುಗಳು, ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸ್ವತ್ತುಗಳ ದತ್ತಾಂಸ ಸಂಗ್ರಹಣಾ ಕಾರ್ಯ ಕೈಗೊಳ್ಳಲಾಗುತ್ತಿದೆ.
5. ಈ ನಿಗಮದಲ್ಲಿ ಸರ್ಕಾರಿ ಜಮೀನುಗಳ ಹಾಗೂ ಸಾರ್ವಜನಿಕ ಜಮೀನುಗಳ ಒತ್ತುವರಿಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಮಾಣದಲ್ಲಿ ದೂರುಗಳು ಬರುತ್ತಿವೆ. ಈ ದೂರುಗಳ ಮೇಲೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುತ್ತದೆ.

ಮೇಲಿನಂತೆ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ರಾಜ್ಯದ ಜಿಲ್ಲಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸುವ ಅಗತ್ಯವಿರುತ್ತದೆ. ಅಲ್ಲದೆ, ವಿವಿಧ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಸಮಾಲೋಚನಾ ಸಭೆ, ಕಾರ್ಯಾಗಾರ ಮುಂತಾದವುಗಳನ್ನು ನಡೆಸುವ ಅಗತ್ಯವಿರುತ್ತದೆ. ಇದಕ್ಕಾಗಿ ಈ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸದರಿ ಅಧಿಕಾರಿಗಳು ಹಾಗೂ ಪ್ರಾಧಿಕಾರಗಳ ಮೇಲಿ ಹತೋಟಿ ಹಾಗೂ ನಿಯಂತ್ರಣವನ್ನು ಹೊಂದಿರಬೇಕಾದ್ದು ಅತ್ಯಾವಶ್ಯಕಾವಾಗಿದೆ. ಆದ್ದರಿಂದ, ಸದರಿ ಹುದ್ದೆಯನ್ನು ಈ ಹಿಂದೆ ಜಾರಿಯಲ್ಲಿದ್ದಂತೆ **ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ** ಎಂದು ಪುನರ್ ಪದನಾಮೀಕರಣ ಮಾಡಿ ಸೂಕ್ತ ಆದೇಶ ಹೊರಡಿಸುವಂತೆ ಉಲ್ಲೇಖ(3)ರ ಪತ್ರದಲ್ಲಿ ಕಂದಾಯ ಇಲಾಖೆಯನ್ನು ಕೋರಿದ್ದು, ಸದರಿ ಪ್ರಸ್ತಾವನೆ ಕಂದಾಯ ಇಲಾಖೆಯಿಂದ ಸಿ.ಅ.ಸು.ಇಲಾಖೆ ಬಂದು ಪರಿಶೀಲನೆಯಲ್ಲಿರುವುದಾಗಿ ತಿಳಿದು ಬಂದಿರುತ್ತದೆ. ಆದ್ದರಿಂದ, ಕರ್ನಾಟಕ ಸಾರ್ವಜನಿ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ಈ ಹಿಂದೆ ಜಾರಿಯಲ್ಲಿದ್ದಂತೆ **ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ಹಾಗೂ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ** ಎಂದು ಪುನರ್ ಪದನಾಮೀಕರಣ ಮಾಡಿ ಸೂಕ್ತ ಆದೇಶ ಹೊರಡಿಸುವಂತೆ ಕೋರಿದೆ.

**ವಂದನೆಗಳೊಂದಿಗೆ**

ತಮ್ಮ

**ಶ್ರೀ ರಮಣರೆಡ್ಡಿ ಭಾ.ಆ.ಸೇ.,**
ಪ್ರಧಾನ ಕಾರ್ಯದರ್ಶಿಗಳು,
ಸಿ.ಆ.ಸು.ಇಲಾಖೆ,
ಬೆಂಗಳೂರು.